ಪಿ.ಡಬ್ಲ್ಯೂ-4
ಸಿ.ಡಬ್ಲ್ಯೂ- 5

ದಿನಾಂಕ 17-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ಕರಿಸಲಾಯಿತು.

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ಶ್ರೀ. ಎನ್.ಆರ್.ಎನ್ ವಕೀಲರಿಂದ**

19. ನಾನು ದಿನಾಂಕಃ 20-08-2020 ರಂದು ಚಾಸಾ-11 ರವರಿಗೆ ಹೇಳಿಕೆ ನೀಡಿದ್ದೇನೆ. ನನ್ನ ಹೇಳಿಕೆಯಲ್ಲಿ ನಾನು ಸಮಸ್ಥಿತಿಯಲ್ಲಿರುವಾಗಲೇ, ನಾಗೇಂದ್ರ ಕಣ್ಣಯ್ಯಾ ಗೌಡಾ ದಾರಿಯಲ್ಲಿ ಸಿಕ್ಕಿದಾಗ ಆತನನ್ನು ವಿಚಾರಿಸಲಾಗಿ, ಆತ ಕಡವೆ ಕೊಂದಿದ್ದ ಸ್ಥಳ ಮುಂತಾದವುಗಳನ್ನು, ಹೇಳಿರುತ್ತೇನೆ. ನಾಗೇಂದ್ರ ಕಣ್ಣಯಾ ಗೌಡಾ ನನಗೆ ಆತನ ಮನೆಗೆ ಹೋಗುವ ದಾರಿಯಲ್ಲಿ ಸಿಕ್ಕಿರುತ್ತಾನೆ. ಆ ದಾರಿ ನಾನು ಹೇಳುವಂತಹ 1 ನೇ ಮತ್ತು 2 ನೇ ಆರೋಪಿಯನ್ನು ಹಿಡಿದೆವು ಎಂದು ಹೇಳುವ ದಾರಿ ಅಲ್ಲ. ನನ್ನ ಪ್ರಕಾರ ನಾಗೇಂದ್ರ ಕಣ್ಣಯ್ಯಾ ಗೌಡಾ ನ ಮನೆಗೆ ಹೋಗಲು 3 ದಾರಿಗಳು ಇವೆ. ಆ ದಾರಿಗಳ ಪೈಕಿ ಒಂದು ದಾರಿ ಹೈವೆಗೆ ಬಂದು ಸೇರುವುದಿಲ್ಲ. ಆ ಸೇರದ ದಾರಿ ಪೂರ್ವದಿಂದ ಪಶ್ಚಿಮಕ್ಕೆ ಹೋಗುತ್ತದೆ. ಆ ಪೂರ್ವದಿಂದ ಪಶ್ಚಿಮಕ್ಕೆ ಹೋಗುವ ದಾರಿ ನಾವು ಆ ದಿನ ಆತನ ಮನೆಗೆ ಹೋಗಲು ಉಪಯೋಗಿಸಿದ ದಾರಿ. ಆ ದಾರಿ ಸುಮಾರು 150 ಮೀ. ಉದ್ದ ಇದೆ. ಆ ದಾರಿ ಯಲ್ಲಾಪುರ ಕಡೆಯಿಂದ ಅಂಕೋಲಾ ಕಡೆಗೆ ಬರುವ ದಾರಿಯಾಗಿರುತ್ತದೆ. ಆತನ ಮನೆಗೆ ನಾವು 150 ಮೀ. ನಡೆದುಕೊಂಡು ಹೋಗಿರುತ್ತೇವೆ. ಆ ದಾರಿಯ ಉತ್ತರಕ್ಕೆ ನಾಗೇಂದ್ರ ಕಣ್ಣಯ್ಯಾ ನ ಮನೆ ಬರುತ್ತದೆ. ಆತನ ಮನೆ ಆ ದಾರಿಯಿಂದ 25 ಮೀ ದೂರದಲ್ಲಿದೆ. ಆ ದಿನ ಆತನನ್ನು ಆ ದಾರಿಯ ಉತ್ತರ ದಿಕ್ಕಿನಲ್ಲಿ ಬಂಧಿಸಿದ್ದೇವೆ. ಆ ದಾರಿ ಬಿ.ಡಿ.ಗೌಡ ರ ತೋಟದ ಪಶ್ಚಿಮ ದಿಕ್ಕಿಗೆ ಬರುತ್ತದೆ. ಬಿ.ಡಿ.ಗೌಡರ ಮನೆಯಿಂದ ಆ ದಾರಿ ಅಂದಾಜು 450 ಮೀ ದೂರದಲ್ಲಿದೆ. ಯಲ್ಲಾಪುರ-ಅಂಕೋಲಾ ಹೈವೆಯಿಂದ ಬಿ.ಡಿ.ಗೌಡರ ಅಥವಾ 1 ನೇ ಆರೋಪಿಯ ಮನೆ ಅಂದಾಜು 350 ಮೀ ದೂರದಲ್ಲಿದೆ. ಆ ಮನೆ ಆ ಹೈವೆಯ ಉತ್ತರ ದಿಕ್ಕಿಗೆ ಇದೆ.

20. ಆ ಕಾಲುದಾರಿ ಅಕ್ಕಪಕ್ಕದಲ್ಲಿ ಯಾವುದೇ ಸೇತುವೆ ಇರುವುದಿಲ್ಲ. ಆ ಕಾಲುದಾರಿಯಲ್ಲಿ ಆರೋಪಿ ಬೈಕ್ ಇದ್ದ ಸ್ಥಳದಿಂದ 200 ಮೀ ದೂರದಲ್ಲಿ ಬಸ್ ಸ್ಟ್ಯಾಂಡ್ ಹಾಗೂ 250 ಮೀ ದೂರದಲ್ಲಿ ಅಂಗಡಿ ಕಟ್ಟಡ ಇತ್ತು.

ನಾನು ಹೇಳುವಂತಹ ಚರ್ಮವನ್ನು ಪೂರ್ತಿಯಾಗಿ ಪರಿಶೀಲನೆ ಮಾಡಿಲ್ಲ, ನೋಡಿರುವುದು ಅಷ್ಟೇ. ನನಗೆ ಪರಿಶೀಲಿಸಲು ಹೇಳಿರುವುದಿಲ್ಲ. ನಾನು 1 ಮೀ ದೂರದಿಂದ ಅದನ್ನು ನೋಡಿದ್ದೇನೆ. ತಲೆ ಮತ್ತು ಕಾಲುಗಳನ್ನು ಕೂಡ 1 ಮೀ ದೂರದಿಂದ ನೋಡಿದ್ದೇನೆ. ಅವುಗಳನ್ನು ಕೈಯಿಂದ ಹಿಡಿದು ಪರಿಶೀಲಿಸಿಲ್ಲ. ಕಡವೆಯ ಬಲ ಮತ್ತು ಎಡ ಭಾಗವನ್ನು ನೋಡಿದ್ದೇನೆ. ಕಡವೆಯ ಎಡ ಭಾಗದ ಚರ್ಮವನ್ನು ನನ್ನ ಪ್ರಕಾರ ವೈದ್ಯರು ಕತ್ತರಿಸಿದರು. ಆರೋಪಿ ಬೇಟೆ ಯಾಡಲು ಕುಳಿತಿದ್ದೇನೆ ಎಂದು ಹೇಳುವ ಸ್ಥಳವನ್ನು ತೋರಿಸಿದ್ದಾರೆ. ಆ ಸ್ಥಳ ಪ್ರಾಣಿಯ ಮಾಂಸ ಮಾಡಿದ್ದಾರೆ ಎಂದು ಹೇಳುವ ಸ್ಥಳದಿಂದ ಸುಮಾರು 75 ಮೀ ದೂರದಲ್ಲಿದೆ. ನನ್ನ ಪ್ರಕಾರ ಅಂದಾಜು 10-15 ಮೀ ದೂರದಲ್ಲಿ ಆ ಪ್ರಾಣಿಗೆ ಗುಂಡು ಹೊಡೆದಿದ್ದೇನೆ ಎಂದು ಆರೋಪಿ ಹೇಳಿದ್ದ. ಆತ ಕುಳಿತಿದ್ದ ದಕ್ಷಿಣ ದಿಕ್ಕಿಗೆ ಗುಂಡು ಹೊಡೆದಿದ್ದ ಎಂದು ಹೇಳಿದ್ದ. ನನ್ನ ಪ್ರಕಾರ ಆತ ದಕ್ಷಿಣ ದಿಕ್ಕಿಗೆ ಮುಖ ಮಾಡಿ ಕುಳಿತಿದ್ದ. ಆತ ಹೈವೆ ಕಡೆಗೆ ಗುಂಡು ಹೊಡೆದಿದ್ದ. ಆತ ಪ್ರಾಣಿ ಪೂರ್ವ ದಿಕ್ಕಿನ ಕಡೆಗೆ ಹೋಗಿ ಬಿದ್ದಿರಬಹುದು ಎಂದು ಹೇಳಿದ್ದ. ಆತ ಗುಂಡು ಹೊಡೆದಿದ್ದ ಎಂದು ಹೇಳುವ ಸ್ಥಳದಿಂದ ಪ್ರಾಣಿ ಬಿದ್ದಿತ್ತು ಎಂದು ಹೇಳುವ ಸ್ಥಳದವರೆಗೆ ಸ್ಥಳವನ್ನು ತೋರಿಸಿದ್ದ. ನನ್ನ ಪ್ರಕಾರ ರಕ್ತದ ಕಲೆಗಳು ಇರಲಿಲ್ಲ. ಚಾಸಾ-1 ರವರು ರಕ್ತದ ಕಲೆಗಳನ್ನು ತೋರಿಸಿಲ್ಲ.

21. ನನ್ನ ಪ್ರಕಾರ ಪ್ರಾಣಿ ಸತ್ತು ಬಿದ್ದ ಸ್ಥಳದಿಂದ ಸುಮಾರು 40 ಮೀ ದೂರದಲ್ಲಿ ಅದರ ಮಾಂಸ ಮಾಡಿರುವುದು. ಆ 40 ಮೀ ಅಂತರದಲ್ಲಿ ರಕ್ತದ ಕಲೆಗಳು ಇರಲಿಲ್ಲ. ಆ ಸ್ಥಳದಿಂದ ನನ್ನ ಪ್ರಕಾರ ಪ್ರಾಣಿಯನ್ನು ಎಳೆದುಕೊಂಡು ಅಥವಾ ಹೊತ್ತುಕೊಂಡು ಹೋಗಿ ಮಾಂಸ ಮಾಡಿದ್ದಾರಾ ಎಂದರೆ ಸಾಕ್ಷಿ ಹಳ್ಳದ ಹತ್ತಿರ ಬಿದ್ದ ಸ್ಥಳದಲ್ಲೇ ಮಾಂಸ ಮಾಡಿದ್ದಾರೆ ಎಂದು ನುಡಿಯುತ್ತಾರೆ. ಪ್ರಾಣಿ ಸತ್ತು ಬಿದ್ದಿತ್ತು ಎಂದು ಹೇಳುವ ಸ್ಥಳದಲ್ಲಿ ರಕ್ತದ ಮಡು ಇತ್ತು. ಸುಮಾರು 2 ಲೀ. ನಷ್ಟು ರಕ್ತ ಹೆಪ್ಪುಗಟ್ಟಿ ಆ ಸ್ಥಳದಲ್ಲಿ ಇತ್ತು. ನಾನು ಹೇಳುವಂತಹ ಕಡವೆ ಊರ ಆಕಳಿಗಿಂತ ಸ್ವಲ್ಪ ಚಿಕ್ಕದು ಹಾಗೂ ಊರ ಆಕಳಿನ ಕರುವಿಗಿಂತ ಸ್ವಲ್ಪ ದೊಡ್ಡದು. ಅಂದಾಜು 35 ರಿಂದ 40 ಕೆ.ಜಿ ತೂಕದ್ದು ಆಗಿತ್ತು. ಪ್ರಾಣಿಗೆ ಗುಂಡು ತಗುಲಿ ರಕ್ತ ಬರುತ್ತಿರುವುದು ಅದರ ಶ್ವಾಸ ನಿಂತಾಗ ರಕ್ತ

ಗಾಯ ಅದ ಜಾಗದಲ್ಲಿ ನಿಲ್ಲುತ್ತದೆ ಹಾಗೂ ಅಲ್ಲಿ ಗಟ್ಟಿ ಆಗುತ್ತದೆ ಎಂದರೆ ಸರಿ. ಆ ಜಾಗದಲ್ಲಿ ರಕ್ತ ಹೆಪ್ಪುಗಟ್ಟಿ ಕಪ್ಪು ಬಣ್ಣಕ್ಕೆ ತಿರುಗುತ್ತದೆ. ಆ ರೀತಿ ಪ್ರಾಣಿಯನ್ನು ಕೊಯ್ದಾಗ ಹೆಚ್ಚಾಗಿ ರಕ್ತ ಹೊರಗೆ ಬರುತ್ತದೆ. ಅಂತಹ ಪ್ರಾಣಿಯ ಕರುಳು ಬಹಳ ಉದ್ದವಾಗಿ ಅಗಲವಾಗಿರುತ್ತದೆ ಎಂದರೆ ಸರಿ. ಮೇಲೆ ಹೇಳಿದಂತಹ 2 ಲೀ ರಕ್ತ ಹೆಪ್ಪುಗಟ್ಟಿದ ರಕ್ತ ಬಿಟ್ಟು ಬೇರೆ ರಕ್ತ ನೋಡಿಲ್ಲ. ಪ್ರಾಣಿ ಬಿದ್ದ ಹಾಗೂ ಮಾಂಸ ಮಾಡಿದ ಸ್ಥಳ ಅದೇ ಜಾಗವಾಗಿತ್ತು. 2 ಮೀ ರಿಂದ 3 ಮೀ ಸುತ್ತಳತೆ ಜಾಗದಲ್ಲಿ ಮಾಂಸ ಮಾಡಿದ್ದಾರೆ. ಆ ಜಾಗದಲ್ಲಿ ಆ ಪ್ರಾಣಿಯ ಗೊರಸಿನ ಅಚ್ಚು ನೆಲದಲ್ಲಿ ಕಂಡು ಬಂದಿತ್ತು. ಆ ಜಾಗದಲ್ಲಿ ಅತಿ ಸಣ್ಣ ಮಾಂಸದ ಚೂರುಗಳು ಹಾಗೂ ಎಲುಬಿನ ಚೂರುಗಳು ಕಂಡು ಬಂದಿದ್ದವು. ಆ ಪ್ರಾಣಿಯ ಕೂದಲು ಕೂಡ ಅಲ್ಲಿ ಇತ್ತು. ಮಣ್ಣಿನ ನೆಲದ ಮೇಲೆ ಮಾಂಸ ಕತ್ತರಿಸಿದಾಗ ಮಾಂಸದ ಚೂರುಗಳು, ಎಲುಬಿನ ಚೂರುಗಳು ಹಾಗೂ ರಕ್ತ ಸೇರಿ ಮುಣ್ಣು ಅಂಟು ಮಣ್ಣಾಗುತ್ತದೆ ಎಂದರೆ ಸರಿ. ಆ ರೀತಿ ಅಂಟು ಆಗಿರುವ ಮಣ್ಣನ್ನು ನೋಡಿದ್ದೇನೆ, ಪರಿಶೀಲನೆ ಮಾಡಿಲ್ಲ. ಪಶು ವೈದ್ಯಾಧಿಕಾರಿ ಅವುಗಳನ್ನು ಪರಿಶೀಲಿಸಿದ್ದಾರೆ. ಉಳಿದ ಸಿಬ್ಬಂದಿಗಳು ಯಾರು ಪರಿಶೀಲಿಸಿದ್ದಾರೆ ಎಂದು ನೆನಪಿಲ್ಲ. ನಾವು ಆ ಸ್ಥಳಕ್ಕೆ ಹೋದ ನಂತರ ಪಶು ವೈದ್ಯಾಧಿಕಾರಿಯನ್ನು ಕರೆಸಿದ್ದು. ಸ್ಥಳವನ್ನು ಪರಿಶೀಲನೆ ಮಾಡಿದಾಗ ಮಧ್ಯಾಹ್ನ 3-30 ಯಿಂದ 4-00 ಗಂಟೆ ಒಳಗೆ ಆಗಿತ್ತು. ವೈದ್ಯಾಧಿಕಾರಿಗೆ ಮಧ್ಯಾಹ್ನ 2-00 ಗಂಟೆಗೆ ಫೋನ್ ಕರೆ ಮಾಡಿದ್ದೆವು. ಅವರಿಗೆ ಕರೆ ಮಾಡುವ ಮುಂಚೆ ಚಾಸಾ-1 ರವರು ಸ್ಥಳ ಪರಿಶೀಲನೆ ಮಾಡಿದ್ದಾರೆ. ಉಳಿದ ಸಿಬ್ಬಂದಿಗಳಾದ ನಾವು ಕೂಡ ಕರೆ ಮಾಡುವ ಪೂರ್ವದಲ್ಲಿ ವೀಕ್ಷಣೆ ಮಾಡಿದ್ದೇವೆ. ನಾವು ವೀಕ್ಷಣೆ ಮಾಡುವಾಗ ಪ್ರಾಣಿ ಗುಂಡು ಹಾರಿಸಿ ಸತ್ತು ಬಿದ್ದಿರುವುದು ಹಾಗೂ ಅದರ ಮಾಂಸ ಮಾಡಿರುವುದು ಕಂಡು ಬಂದಿರುವುದರಿಂದ ಅದರ ನಿಖರತೆ ಕಂಡು ಹಿಡಿಯಲು ಪಶು ವೈದ್ಯರು ಪರಿಶೀಲನೆ ಮಾಡಬೇಕು. ನಾವು ಅದನ್ನು ಕೈಯಿಂದ ಹಿಡಿದು ಪರಿಶೀಲಿಸಲು ಬರುವುದಿಲ್ಲ. ಅದನ್ನು ಪಶು ವೈದ್ಯಾಧಿಕಾರಿಯೇ ಪರಿಶೀಲಿಸಿ ಸಂಬಂಧಪಟ್ಟವರು ವರದಿ ನೀಡಲು ತೊಂದರೆಯಾಗಿರುವುದರಿಂದ ನಾವು ಅದನ್ನು ಮುಟ್ಟಿ ಪರಿಶೀಲಿಸಿರುವುದಿಲ್ಲ. ಯಾವುದೇ ಅಪರಾಧಕ್ಕೆ ಸಂಬಂಧಪಟ್ಟ ವಸ್ತುವನ್ನು ಮುಟ್ಟಿದರೆ ಹಸ್ತ

ಸಾಮುದ್ರಿಕೆ ಸಾಕ್ಷಿ ನಾಶ ವಾಗುತ್ತದೆ ಎಂಬ ಕಾರಣದಿಂದ ನಾವು ಅದನ್ನು ಮುಟ್ಟಿರುವುದಿಲ್ಲ. ಅದನು ಮುಟ್ಟಬಾರದು ಎಂದು ಮೇಲಾಧಿಕಾರಿ ನನಗೆ ಸೂಚಿಸಿರುತ್ತಾರೆ. ಮೇಲಾಧಿಕಾರಿಯವರು ಹಸ್ತ ಸಾಮುದ್ರಿಕ ತಜ್ಞರನ್ನು ಕರೆಸಲು ಆ ದಿನ ಪ್ರಯತ್ನಿಸಿದರಾ ಎಂದು ನೆನಪಿಲ್ಲ. ನಾನು ಮೇಲಾಧಿಕಾರಿಗೆ ಆರೋಪಿಗಳ ಹಸ್ತ ಸಾಮುದ್ರಿಕ ಆ ಪ್ರಾಣಿಯ ಮೇಲೆ ಇರುವುದನ್ನು ಪರಿಶೀಲಿಸಿ ವರದಿ ಪಡೆಯಬೇಕು ಎಂದು ಹೇಳಿಲ್ಲ. ಹಸ್ತ ಸಾಮೂದ್ರಿಕ ಸಾಕ್ಷ್ಯವನ್ನು ಈ ಪ್ರಕರಣದಲ್ಲಿ ಕಲೆ ಹಾಕುವ ಅವಶ್ಯಕತೆ ಇರಲಿಲ್ಲ. ಆರೋಪಿಗಳು, ಬಂದೂಕು ಹಾಗೂ ಮಾಂಸ ಸಿಕ್ಕಿರುವುದರಿಂದ ಹಾಗೂ ಅಪರಾಧ ಮಾಡಿರುವುದನ್ನು ಒಪ್ಪಿರುವುದರಿಂದ ಆ ಸಾಕ್ಷ್ಯದ ಅವಶ್ಯಕತೆ ಇರಲಿಲ್ಲ.

22. ನಾನು ಈ ರೀತಿ 5 ಪ್ರಕರಣಗಳಲ್ಲಿ ಈ ತನಕ ಸಾಕ್ಷಿ ನುಡಿದಿದ್ದೇನೆ. ಸ್ವತಂತ್ರ ಸಾಕ್ಷಿದಾರರು ಇಲ್ಲದಿದ್ದಾಗ ಪೂರಕ ಸಾಂಧರ್ಭಿಕ ಸಾಕ್ಷ್ಯಗಳನ್ನು ಕಲೆ ಹಾಕಬೇಕು ಎಂದರೆ ಸರಿ. ಹಸ್ತ ಸಾಮುದ್ರಿಕ ಸಾಕ್ಷ್ಯವನ್ನು ಕಲೆ ಹಾಕಿದರೆ ಆರೋಪಿಗಳು ಈ ಗುನ್ನೆ ಮಾಡಿಲ್ಲ ಎಂದು ಸಾಬಿತಾಗುತ್ತದೆ ಎಂದು ಹಸ್ತ ಸಾಮೂದ್ರಿಕ ಸಾಕ್ಷ್ಯವನ್ನು ಕಲೆ ಹಾಕಿಲ್ಲ ಎಂದರೆ ಸರಿಯಲ್ಲ. ಆರೋಪಿಗಳ ಕೈ ಹಾಗೂ ಇತರ ಭಾಗದಲ್ಲಿ ಹಾಗೂ ಬಟ್ಟೆಯಲ್ಲಿ ಪ್ರಾಣಿಯ ರಕ್ತ ಅಥವಾ ಮಾಂಸದ ಚೂರುಗಳು ಇತ್ತಾ ಎಂದು ಪರಿಶೀಲಿಸಿದ್ದೇವೆ. 1 ಮತ್ತು 3 ನೇ ಆರೋಪಿಯ ಕೈ ಉಗುರುಗಳ ಭಾಗದಲ್ಲಿ ಮಾಂಸದ ಚೂರು ಹಾಗೂ ರಕ್ತದ ಕಲೆಗಳು ಇತ್ತು. ಅವರನ್ನು ಬಂಧಿಸಿದ ನಂತರ ಅವರ ಕೈಗಳನ್ನು ನಾವು ತೊಳೆಸಿಲ್ಲ. ಪಂಚನಾಮೆಯಲ್ಲಿ ಹಾಗೂ ನನ್ನ ಹೇಳಿಕೆಯಲ್ಲಿ ಅವರ ಕೈಗಳಲ್ಲಿ ಆ ರೀತಿ ಇತ್ತು ಎಂದು ಹೇಳಿ ಬರೆಸಿಲ್ಲ. ನಾನು ಇರುವ ತನಕ ಅವರ ಕೈಗಳ ಪೊಟೊ ತೆಗೆಸಿಲ್ಲ. ಚಾಸಾ-1, ಚಾಸಾ-11 ಹಾಗೂ ನಾನು ಅವರ ಕೈಗಳನ್ನು ನೋಡಿರುವುದು. ಪಂಚನಾಮೆಯಲ್ಲಿ ಹಾಗೂ ಹೇಳಿಕೆಯಲ್ಲಿ ರಕ್ತ ಬಿದ್ದಿರುವುದು ಹಾಗೂ ಮಣ್ಣು ಅಂಟಾಗಿರುವುದು ಹಾಗೂ ಮಾಂಸದ ಚೂರು ಹಾಗೂ ಎಲುಬಿನ ಚೂರು ಬಿದ್ದಿರುವುದನ್ನು ಹೇಳಿಲ್ಲ.

23. ವೈದ್ಯಾಧಿಕಾರಿಗೆ ಆರ್.ಎಫ್ ಓ ರವರು ಕರೆ ಮಾಡಿದ ಅರ್ಧ ಗಂಟೆಗೆ ಅವರು ಬಂದಿರುತ್ತಾರೆ. RFO ರವರು ಕೂಡ ತಲೆ, ಕಾಲು, ಮಾಂಸ, ಮಾಂಸದ ಚೂರು, ಎಲುಬಿನ ಚೂರು, ರಕ್ತದ ಕಲೆ ಮುಂತಾದವುಗಳನ್ನು ನೋಡಿದ್ದಾರೆ. ಸದ್ರಿ RFO ರವರು ಚಾಸಾ-10 ಆಗಿರುತ್ತಾರೆ. ಅವರು ಮಧ್ಯಾಹ್ನ 2-15 ರ ಒಳಗೆ ಅವುಗಳನ್ನು ಪರಿಶೀಲಿಸಿರುವುದು. ಅವರಿಗೆ ತಜ್ಞರನ್ನು ಕರೆಸಬೇಕು ಎಂಬ ಜ್ಞಾನ ಇರುತ್ತದೆ. ಅದೇ ಸಮಯದಲ್ಲಿ ಚಾಸಾ-11 ರವರು ಕೂಡ ಅವುಗಳನ್ನು ನೋಡಿರುತ್ತಾರೆ. ಅವರು ಮಧ್ಯಾಹ್ನ 2-05 ರಿಂದ 2-10 ರ ಒಳಗೆ ಬಂದಿರುತ್ತಾರೆ. ಅವರು ಹೈವೆ ತನಕ ವಾಹನದಲ್ಲಿ ಬಂದು ನಂತರ ನಮ್ಮ ಜೊತೆ ನಡೆದುಕೊಂಡು ಬಂದಿರುತ್ತಾರೆ. ಚಾಸಾ-1, ಚಾಸಾ-10, ಚಾಸಾ-11 ಹಾಗೂ ನನಗೆ ಕಡವೆಯ ಬಿಡಿಭಾಗಗಳು, ರಕ್ತದ ಕಲೆಗಳು, ಚೂರುಗಳು ಮುಂತಾದವುಗಳನ್ನು ಸಾಕ್ಷ್ಯವಾಗಿ ಕಲೆ ಹಾಕಬೇಕು ಎಂದು ಜ್ಞಾನ ಇದೆ. ಈ ಪ್ರಕರಣದಲ್ಲಿ ಚಾಸಾ -10 ಅಥವಾ 11 ರವರು ತಾವೆ ಸ್ವತಃ ದೂರು ಕೊಡುತ್ತೇವೆ ಎಂದು ಹೇಳಿದ್ದಾರಾ ಎಂದು ನನಗೆ ನೆನಪಿಲ್ಲ. ಆ ಬಗ್ಗೆ ನನ್ನ ಸಮಕ್ಷಮದಲ್ಲಿ ಮಾತುಕತೆ ಆಗಿಲ್ಲ.

24. ಮಾಂಸ ಮಾಡಿದರೂ ಎಂದು ಹೇಳುವ ಸ್ಥಳದಿಂದ ಬಿ.ಡಿ.ಗೌಡರ ತೋಟಕ್ಕೆ 5 ಮೀ ದೂರ ಇದೆ. ಆ ತೋಟಕ್ಕೆ ಗುಂಡು ಕಲ್ಲಿನ ಪಾಗಾರ ಇರುತ್ತದೆ. ಅಲ್ಲಿಂದ ಅವರ ಮನೆ 300 ರಿಂದ 350 ಮೀ ದೂರದಲ್ಲಿದೆ. ಬಿ.ಡಿ.ಗೌಡರ ಮನೆಗೆ ಹೋಗಿ ಸಾಕ್ಷಿಗೆ ಜನರನ್ನು ಕರೆಸುವ ಪ್ರಯತ್ನ ಮಾಡಿಲ್ಲ. ಬಿ.ಡಿ.ಗೌಡರು ಗ್ರಾಮ ಅರಣ್ಯ ಸಮಿತಿಯ ಅಧ್ಯಕ್ಷರು ಆಗಿದ್ದರು ಎಂಬುದು ನನಗೆ ಗೊತ್ತಿಲ್ಲ. ಚಾಸಾ-1 ರವರು ಅವರನ್ನು ಕರೆಸಿ ಸಾಕ್ಷ್ಯ ಮಾಡಬೇಕು ಎಂದು ನನ್ನ, ಚಾಸಾ-10 ಮತ್ತು ಚಾಸಾ-11 ರ ಸಮಕ್ಷಮ ಪ್ರಯತ್ನ ಪಟ್ಟಿಲ್ಲ. ಆ ದಿನ ಸ್ವತಂತ್ರ ಸಾಕ್ಷಿಗಳನ್ನು ಹುಡುಕಲು ಪ್ರಯತ್ನ ಪಟ್ಟಿಲ್ಲ. ಬಂದೂಕು ಲೋಡಾಗಿತ್ತಾ ಅಥವಾ ಇಲ್ಲವಾ ಎಂದು ಪರಿಶೀಲನೆ ಮಾಡಿದ್ದೇವೆ. ಯಾರು ಮಾಡಿದ್ದು ಎಂದು ನೆನಪಿಲ್ಲ. ಯಾವುದರ ಮುಖಾಂತರ ಪರಿಶೀಲನೆ ಮಾಡಿದ್ದಾರೆ ಎಂದು ನೆನಪಿಲ್ಲ. ನಾವು ವಶ ಪಡಿಸಿದ್ದೇವೆ ಎಂದು ಹೇಳುವ ಬಂದೂಕು ಲೋಡ ಆಗಿದೆಯಾ ಇಲ್ಲವಾ ಎಂದು ಯಾವ ರೀತಿ ಪರಿಶೀಲಿಸಬೇಕು ಎಂದು ನನಗೆ ಗೊತ್ತಿಲ್ಲ. ವಶ ಪಡಿಸಿದ್ದೇವೆ ಎಂದು ಹೇಳುವ ಬಂದೂಕಿನ

ಉದ್ದ, ದಸ್ತಿನ ಉದ್ದ, ನಳಿಕೆಯ ಉದ್ದ ಹಾಗೂ ಆಕಾರವನ್ನು ಪಂಚನಾಮೆಯಲ್ಲಿ ಹಾಗೂ ನನ್ನ ಹೇಳಿಕೆಯಲ್ಲಿ ಹೇಳಿಲ್ಲ. ಮೇಲಾಧಿಕಾರಿ ಬಂದೂಕಿನಿಂದ ಗುಂಡು ಸಿಡಿಸಲಾಗಿರುವುದನ್ನು ಯಾವ ರೀತಿ ಪರಿಶೀಲಿಸಬೇಕು ಎಂದು ಹೇಳಿಲ್ಲ. ಬಂದೂಕು ಲೋಡವಾಗಿತ್ತು ಎಂದು ನಾನು ಹೇಳಿಕೆ ಕೊಟ್ಟಿಲ್ಲ. ಲೋಡ ಆಗಿದ್ದ ಬಂದೂಕನ್ನು ಅಥವಾ ಅನ್ ಲೋಡ ಆಗಿದ್ದ ಬಂದೂಕನ್ನು ವಶ ಪಡಿಸಿದ್ದಾರಾ ಎಂದು ನನಗೆ ಗೊತ್ತಿಲ್ಲ. ಆ ದಿನ ವಶಪಡಿಸಿಕೊಂಡೆವು ಎಂದು ಹೇಳುವ ಕತ್ತಿಯ ಹಿಡಿಕೆ ಯಾವುದರದ್ದು ಹಾಗೂ ಅದರ ಉದ್ದವನ್ನು ಹೇಳಿಲ್ಲ. ಕಂಪನಿಯಿಂದ ತಯಾರಾದ ಬಂದೂಕಿಗೆ ನಿರ್ದಿಷ್ಟ ಅಳತೆ ಇರುತ್ತದೆ ಹಾಗೂ ನಾಡ ಬಂದೂಕು ಬೇರೆ ಬೇರೆ ರೀತಿಯ ಅಳತೆಯಲ್ಲಿ ಇರುತ್ತದೆ ಎಂದರೆ ಸರಿ. ನನ್ನ ಸಮಕ್ಷಮದಲ್ಲಿ ಬಂದೂಕಿನ ನಳಿಕೆಯ ಒಳ ಭಾಗದಲ್ಲಿ ಕಾರ್ಬನ್ ಅಂಟಿದೆಯಾ ಎಂದು ಪರಿಶೀಲಿಸಿಲ್ಲ.

25. ಬಂದೂಕನ್ನು ಲೋಡ್ ಮಾಡಲು ಏನೆಲ್ಲಾ ವಸ್ತುಗಳ ಅವಶ್ಯಕತೆ ಇದೆ ಎಂದು ಗೊತ್ತಿಲ್ಲ. ಬಂದುಾಕಿನಿಂದ ಗುಂಡು ಸಿಡಿಸಲು ಕಿವಿಯ ಭಾಗಕ್ಕೆ ಸಿಡಿತಲೆಯನ್ನು ಹಾಕಬೇಕು. ನನ್ನ ಸಮಕ್ಷಮ ಮೇಲಾಧಿಕಾರಿ ಬಂದೂಕಿನ ಕಿವಿಯ ಭಾಗದಲ್ಲಿ ಅಥವಾ ಬೇರೆ ಭಾಗದಲ್ಲಿ ಸಿಡಿತಲೆ ಇತ್ತಾ ಎಂದು ತೋರಿಸಿಲ್ಲ. ನನಗೆ ನಾನು ಹೇಳಿದಂತಹ ಬಂದೂಕನ್ನು ಲೋಡ್ ಆಗಿದೆಯಾ ಇಲ್ಲವಾ ಅಥವಾ ಸಿಡಿತಲೆ ಇತ್ತಾ ಎಂಬುದನ್ನು ಪರಿಶೀಲಿಸಲು ನನಗೆ ತೊಂದರೆ ಇರಲಿಲ್ಲ. ನಳಿಕೆಗೆ ಮದ್ದು ಗುಂಡುಗಳನ್ನು ತುಂಬಿರುವುದನ್ನು ತೆಗೆದಾಗ ಅವುಗಳಿಗೆ ಕಾರ್ಬನಿ ಕೃತವಾಗಿ ಹೊರಬರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಮದ್ದಿನ ಮೇಲೆ ಗುಂಡು ಹಾಕಿ ಅದು ನಿಂತು ಕೊಳ್ಳಲು ಏನು ಹಾಕಬೇಕು ಎಂದು ನನಗೆ ಗೊತ್ತಿಲ್ಲ. ಬರಿ ಮದ್ದು ಹಾಗೂ ಗುಂಡನ್ನು ನಳಿಕೆಗೆ ಹಾಕಿ ಅದನ್ನು ನೆಲ ಮುಖವಾಗಿ ಬಗ್ಗಿಸಿದರೆ ಮದ್ದು ಗುಂಡುಗಳು ಬಿದ್ದು ಹೋಗುತ್ತವೆ ಎಂದರೆ ಸರಿ. ಪ್ಯಾಕೆಜ್ ಮಾಡದೇ ಮದ್ದು ಗುಂಡುಗಳು ತುಂಬಿದ್ದರೆ ಬಂದೂಕನ್ನು ತೆಗೆದುಕೊಂಡು ಹೋಗುವಾಗ ಕೂಡ ಬಿದ್ದು ಹೋಗುವ ಸಂದರ್ಭ ಇದೆ ಎಂದರೆ ಸರಿ. ಕಡವೆಗೆ ಗುಂಡು ಯಾವ ಭಾಗಕ್ಕೆ ತಗುಲಿದೆ ಎಂದು ನನಗೆ ನೆನಪಿಲ್ಲ. ನನ್ನ ಸಮಕ್ಷಮ ತಲೆಯ ಭಾಗವನ್ನು ಕತ್ತರಿಸಿರುತ್ತಾರೆ. ನನ್ನ ಸಮಕ್ಷಮ ತಲೆಯ ಭಾಗವನ್ನು ಕತ್ತರಿಸಿರುವುದು

ಮಾತ್ರ ನೆನಪಿದೆ. ಭ್ರೂಣವನ್ನು ಕತ್ತರಿಸಿ ಹೊರಗೆ ತೆಗೆದಿದ್ದಾರೆ. ಆ ಭಾಗವನ್ನು ಮಾದರಿ ತೆಗೆದಿದ್ದಾರಾ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಕಾಲುಗಳ ಭಾಗ ಕತ್ತರಿಸಿದ್ದಾರೆ. ಮಾಂಸದ ಭಾಗವನ್ನು ನನ್ನ ಸಮಕ್ಷಮ ಕತ್ತರಿಸಿರುವುದು ನನಗೆ ನೆನಪಿಲ್ಲ. ತಲೆಯಭಾಗವನ್ನು ಮಾತ್ರ ಮಾದರಿ ತೆಗೆದಿರುವುದು ನೆನಪಿದ್ದು, ಉಳಿದದ್ದು ನೆನಪಿಲ್ಲ. ಮಧ್ಯಾಹ್ನ 3-45 ಕ್ಕೆ ಫೋಟೊ ತೆಗೆದಿರುತ್ತಾರೆ. ಅದರ ಸಿಡಿ ಮಾಡಿದ್ದಾರಾ ಎಂದು ನೆನಪಿಲ್ಲ. ಸಿಡಿಯನ್ನು ನನಗೆ ತೋರಿಸಿಲ್ಲ.

26. ದಿನಾಂಕ 14-08-2020 ರಂದು ಬಾಳೆಗುಳಿ ಶಾಖಾ ಉಪ ಅರಣ್ಯಾಧಿಕಾರಿಯಾದ ಚಾಸಾ-1 ರವರು ನನಗೆ ದೂರವಾಣಿ ಮೂಲಕ ಕರೆಮಾಡಿ ನವಗದ್ದೆ ಗ್ರಾಮದ ಕಂಚಿನಬಾಗಿಲು ಹತ್ತಿರ ರಾಷ್ಟ್ರೀಯ ಹೆದ್ದಾರಿ 63 ರ ಹತ್ತಿರ 1 ನೇ ಆರೋಪಿಯ ಮನೆಗೆ ಹೋಗುವ ದಾರಿಯಲ್ಲಿ 1 ಕಡವೆಯನ್ನು ಬೇಟೆಯಾಡಿ ಅದರ ಮಾಂಸವನ್ನು ಬೇರ್ಪಡಿಸಿ, ಅನಧಿಕೃತವಾಗಿ ಸಾಗಾಟ ಮಾಡುತ್ತಿರುವ ಬಗ್ಗೆ ಖಚಿತ ವರ್ತಮಾನ ಇರುವುದನ್ನು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ನಾನು ಅಂಕೋಲಾ ವಲಯ ಅರಣ್ಯಾಧಿಕಾರಿ ಕಚೇರಿಗೆ ಬಂದು ಅಲ್ಲಿ ನನ್ನ ಜೊತೆ ಚಾಸಾ-1, ಚಾಸಾ-6, ಚಾಸಾ-7 ಮತ್ತು ಪಂಚರಾದ ಚಾಸಾ-2 ಮತ್ತು 3 ರವರು ಎಲ್ಲ ಸೇರಿ, ಇಲಾಖಾ ವಾಹನದಲ್ಲಿ ರಾಷ್ಟ್ರೀಯ ಹೆದ್ದಾರಿ 63 ರಲ್ಲಿ ಮುಂದೆ ಸಾಗಿ 1 ನೇ ಆರೋಪಿಯ ಮನೆಗೆ ಹೋಗುವ ಕಾಲು ದಾರಿಯಲ್ಲಿ ಸುಮಾರು 50 ಮೀಟರ್ ಹಿಂದುಗಡೆ ಕಾಯುತ್ತ ಕುಳಿತಿದ್ದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುಮಾರು ಮಧ್ಯಾಹ್ನ 1-00 ಘಂಟೆಗೆ ಆ ಕಾಲು ದಾರಿಯ ಹತ್ತಿರ ಒಂದು ಬೈಕ್ ನಿಲ್ಲಿಸಿರುವುದನ್ನು ಗಮನಿಸಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 5 ನಿಮಿಷದ ನಂತರ ಆ ಬೈಕಿನ ಹತ್ತಿರ ಇಬ್ಬರು ಆಸಾಮಿಗಳು ಬರುವುದನ್ನು ಗಮನಿಸಿದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ ನಮ್ಮ ಇಲಾಖಾ ವಾಹನವನ್ನು ಆ ಬೈಕಿನ ಹತ್ತಿರ ತೆಗೆದುಕೊಂಡು ಹೋಗಲು ಪ್ರಾರಂಭಿಸಿದಾಗ, ಆ ಇಬ್ಬರ ಆಸಾಮಿಗಳ ಪೈಕಿ

ಒಬ್ಬ ಆತನ ಬಳಿ ಇದ್ದ ಪ್ಲಾಸ್ಟಿಕ್ ಚೀಲವನ್ನು ಅಲ್ಲಿಯೇ ಎಸೆದು, ಅರಣ್ಯ ಪ್ರದೇಶದಲ್ಲಿ ಆ ಇಬ್ಬರು ಓಡಲು ಪ್ರಾರಂಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

27 ನಾವು ಅವರಿಬ್ಬರನ್ನು ಬೆನ್ನಟ್ಟಿ , ಹಿಡಿದು ಆ ಚೀಲವನ್ನು ಎಸೆದ ಸ್ಥಳಕ್ಕೆ ತಂದು ನಿಲ್ಲಿಸಿ, ಅವರಿಬ್ಬರ ಹೆಸರು ಕೇಳಲಾಗಿ, ಒಬ್ಬ ಬ್ರಿಜೇಶ ಗೋಪಾಲ ನಾಯಕ ಹಾಗೂ ಇನ್ನೊಬ್ಬ ಹನುಮ ಜಟ್ಟು ಗೌಡ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ 2 ನೇ ಆರೋಪಿಯನ್ನು ವಿಚಾರಿಸಲಾಗಿ, ಅವರು 1 ನೇ ಆರೋಪಿಯಿಂದ ರೂ.1,500/-ಕ್ಕೆ ಕಡವೆ ಮಾಂಸವನ್ನು ತಂದಿರುವುದಾಗಿ ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಪುನಃ 2 ನೇ ಆರೋಪಿಯನ್ನು ಕಡವೆಯನ್ನು ಎಲ್ಲಿ ಬೇಟೆಯಾಡಿ ಮಾಂಸ ಮಾಡಿರುವುದು ಎಂದು ವಿಚಾರಿಸಲಾಗಿ, 3 ನೇ ಆರೋಪಿ ನನ್ನನ್ನು ಕರೆದುಕೊಂಡು ಬಂದಿದ್ದು, 1 ನೇ ಆರೋಪಿಯಿಂದ ಆ ಮಾಂಸವನ್ನು ರೂ.1,500/- ಕ್ಕೆ ಮಾತ್ರ ಖರೀದಿಸಿರುವುದು ಮತ್ತು 3 ನೇ ಆರೋಪಿಗೆ ಆ ಎಲ್ಲ ವಿಚಾರ ಗೊತ್ತಿದೆ ಎಂದು ತಿಳಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ 3 ನೇ ಆರೋಪಿಯನ್ನು ವಿಚಾರಿಸಲಾಗಿ, ದಿನಾಂಕ 13-08-2020 ರಂದು ರಾತ್ರಿ 9-00 ಘಂಟೆ ಸಮಯಕ್ಕೆ 1 ನೇ ಆರೋಪಿ, 5 ನೇ ಆರೋಪಿ ಹಾಗೂ ಅವರು ಸೇರಿ ಟಾರ್ಚ್, ಬಂದೂಕು, ಕತ್ತಿ, ಬ್ಲೆಡ್ ಗಳನ್ನು ಸೇರಿಸಿಕೊಂಡು ಬೇಟೆಯಾಡಲು ಹೋಗುವುದು ಎಂದು ನಿರ್ಧರಿಸಿ, 4 ನೇ ಆರೋಪಿ ನೀಡಿದ ಬಂದೂಕನ್ನು ತೆಗೆದುಕೊಂಡು, ಕಾಯುತ್ತಾ ಕುಳಿತಿರುವಾಗ ಒಂದು ಕಡವೆ ಅವರ ಮುಂದೆ ಹಾದು ಹೋದಾಗ, 1 ನೇ ಆರೋಪಿ ತನ್ನ ಬಳಿ ಇದ್ದ ಬಂದೂಕಿನ ಸಹಾಯದಿಂದ ಅದಕ್ಕೆ ಗುರಿ ಇಟ್ಟು ಹೊಡೆದಿರುತ್ತಾರೆ, ಮತ್ತು ಕಡವೆ ಸ್ಥಳದಲ್ಲಿ ಬಿದ್ದಿರದೆ ಇದ್ದುದರಿಂದ ಅದನ್ನು ಹುಡುಕಾಡಲು, ಸ್ವಲ್ಪ ದೂರದಲ್ಲಿ ಹಳ್ಳದ ಹತ್ತಿರ ಕಡವೆ ಬಿದ್ದಿರುವುನ್ನು ನೋಡಿರುತ್ತಾರೆ ಹಾಗೂ ಹತ್ತಿರ ಬಂದು ನೋಡಿದಾಗ ಕಡವೆ ಮೃತಪಟ್ಟಿರುವುದು ಗೊತ್ತಾಗಿತ್ತು ಎಂದು 3 ನೇ ನುಡಿದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ಹೇಳಿರುವಂತೆ, ಬಹಳ ರಾತ್ರಿಯಾಗಿದ್ದುದರಿಂದ ಅವರು 3 ಜನ 1 ನೇ

ಆರೋಪಿಯ ಮನೆಯಲ್ಲಿ ಮಲಗಿರುತ್ತಾರೆ, ಮತ್ತು ಮುಂಜಾನೆ ಬಂದು, ಅವರ ಬಳಿ ಇದ್ದ ಕತ್ತಿ ಮತ್ತು ಬ್ಲೆಡಿನ ಸಹಾಯದಿಂದ ಆ ಕಡವೆಯ ತಲೆ, 4 ಕಾಲುಗಳನ್ನು, ಹಾಗೂ ಹೊಟ್ಟೆಯ ಭಾಗವನ್ನು ಕತ್ತರಿಸಿ, ಹೊಟ್ಟೆಯಲ್ಲಿದ್ದ ಸಂಪೂರ್ಣ ಬಲಿತ ಭ್ರೂಣವನ್ನು ಕತ್ತರಿಸಿ ಅವುಗಳನ್ನು ಹಳ್ಳದಲ್ಲಿ ಮುಚ್ಚಿ ಅದರ ಮೇಲೆ ಕಲ್ಲನ್ನು ಇಟ್ಟಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರು ಮುಂದುವರಿದು, ಅದರ ಮಾಂಸಗಳನ್ನು ನದಿಯಲ್ಲಿ ತೊಳೆದು 4 ಭಾಗಗಳಾಗಿ ವಿಂಗಡಿಸಿ, ಬಂದೂಕು ನೀಡುವಾಗ 1 ಪಾಲನ್ನು ಅವರಿಗೆ ನೀಡಬೇಕು ಎಂದು ತಿಳಿಸಿದ್ದರಿಂದ 1 ಭಾಗವನ್ನು 4 ನೇ ಆರೋಪಿಗೆ ನೀಡಿರುತ್ತಾರೆ ಎಂದು ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

28. ಸ್ಥಳದಲ್ಲಿ ಇದ್ದ ಮಾಂಸ ಮತ್ತು ಬೈಕ್ ಸಂಖ್ಯೆ ಕೆಎ-30-ಆರ್-3537 ಅನ್ನು ಜಪ್ತು ಮಾಡಿ ಪಂಚನಾಮೆಯನ್ನು ಮಾಡಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 2 ಮತ್ತು 3 ನೇ ಆರೋಪಿಗಳನ್ನು ವಶಕ್ಕೆ ಪಡೆದು ಅವರುಗಳ ಜೊತೆ ಜಪ್ತು ಮಾಡಿದ 7 ಕೆ.ಜಿ. ಕಡವೆ ಮಾಂಸ ಮತ್ತು ಆ ಬೈಕ್ ನೊಂದಿಗೆ ವಲಯ ಕಚೇರಿಗೆ ಬಂದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಅದೇ ದಿನ ವಲಯ ಕಚೇರಿಯಿಂದ ಪುನಃ 1 ನೇ ಆರೋಪಿಯ ಮನೆಗೆ ಹೋಗುವ ಕಾಲು ದಾರಿಯ ಬಳಿಗೆ ಬಂದು ಕಾಲುದಾರಿಯಲ್ಲಿ ಅವರ ಮನೆಗೆ ಹೋಗುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಗ 1 ನೇ ಆರೋಪಿ ಅವರ ಮನೆಯಲ್ಲಿ ಇರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸುತ್ತಮುತ್ತ ಹುಡುಕಾಡಿದಾಗ, ಹತ್ತಿರದಲ್ಲಿದ್ದ ಒಂದು ಕಾಲುವೆಯ ಮಧ್ಯದಲ್ಲಿ ಇದ್ದ ಬಂಡೆಯಲ್ಲಿ 1 ನೇ ಆರೋಪಿ ಮಲಗಿರುವುದು ಕಂಡುಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-2 ಮತ್ತು 3 ರವರು 1 ನೇ ಆರೋಪಿಯನ್ನು ಗುರುತಿಸಿ ಆತನ ಹೆಸರು ಹೇಳುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾವು ಹೋಗಿ 1 ನೇ ಆರೋಪಿಯನ್ನು ವಶಕ್ಕೆ ಪಡೆದೆವು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿಯನ್ನು ವಿಚಾರಿಸಲಾಗಿ, ಬೇಟೆಯಾಡಿರುವ ಸ್ಥಳವನ್ನು ತೋರಿಸುತ್ತೇನೆ

ಎಂದು ಹೇಳಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಸ್ಥಳದಿಂದ ಆತನ ಜೊತೆ 100 ಮೀಟರ್ ಮುಂದೆ ಸಾಗಿದಾಗ, ಕಡವೆ ಸತ್ತು ಬಿದ್ದಿದ್ದ ಸ್ಥಳದಲ್ಲಿ, ಬೇರ್ಪಡಿಸಿದ ತಲೆ, 4 ಕಾಲುಗಳನ್ನು ತೋರಿಸುತ್ತಾರೆ. ಭ್ರೂಣವನ್ನು ನೀರಿನಲ್ಲಿ ಇಟ್ಟಿರುವುದನ್ನು ತೋರಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆದರೆ ಕರಳನ್ನು ನೀರಿನಲ್ಲಿ ಬಿಟ್ಟಿರುವುದರಿಂದ ಸಿಕ್ಕಿರುವುದಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆತನನ್ನು ಯಾವ ಬಂದೂಕಿನಿಂದ ಹೊಡೆದಿರುವುದು ಎಂದು ಕೇಳಿದಾಗ, ಹತ್ತಿರದಲ್ಲಿ ಇರುವ ಬಿ.ಡಿ.ಗೌಡರ ಭಾಗಾಯ್ತು ಜಮೀನಿನಲ್ಲಿ ಒಂದು ತೆಂಗಿನಮರದ ಬುಡದ ಕೆಳಗೆ ಆ ಬಂದೂಕನ್ನು ಬಚ್ಚಿಟ್ಟಿರುವುದಾಗಿ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅದರಂತೆ ಅಲ್ಲಿ ಪರಿಶೀಲಿಸಿದಾಗ, ಬಂದೂಕು ಇರುವುದು ಕಂಡು ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಬಂದೂಕನ್ನು ಆರೋಪಿ 4 ರವರು ನೀಡಿರುವುದಾಗಿ ತಿಳಿಸಿದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 3 ನೇ ಆರೋಪಿ ಹೇಳಿದ ರೀತಿಯ ಸಂಗತಿಗಳನ್ನು 1 ನೇ ಆರೋಪಿ ಕೂಡ ನುಡಿದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ

29. ಆ ತಲೆ, 4 ಕಾಲು, ಭ್ರೂಣ, ಬಂದೂಕು, ಕತ್ತಿಯನ್ನು ಜಪ್ತು ಮಾಡಿ, ಸ್ಥಳದಲ್ಲಿ ಪುರವಣಿ ಪಂಚನಾಮೆಯನ್ನು ಸಂಜೆ 4.30 ರಿಂದ 6.00 ಘಂಟೆಯ ತನಕ ಜರುಗಿಸಿ, ಫೋಟೋವನ್ನು ತೆಗೆದಿರುತ್ತೇವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಂಕೋಲಾ ಪಶುವೈಧ್ಯಾಧಿಕಾರಿಯನ್ನು ಕರೆಸಿ ತಲೆ ಭಾಗದ ಮತ್ತು ಮಾಂಸ ಮತ್ತು ಗುಂಡಿನ ಏಟು ಬಿದ್ದ ಚರ್ಮದ ಭಾಗವನ್ನು ಮಾದರಿ ತೆಗೆಸಲಾಗಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು 3-4 ಕೇಸ್ ಸಾಕ್ಷಿ ನುಡಿದು ಅಭ್ಯಾಸ ಇರುವುದರಿಂದ ಈ ಪ್ರಕರಣದಲ್ಲಿ ಸುಳ್ಳು ಹೇಳಲು ನನ್ನನ್ನು ಸಾಕ್ಷಿಯನ್ನಾಗಿ ಮಾಡಿದ್ದಾರೆ ಎಂದರೆ ಸರಿಯಲ್ಲ.ಮುದ್ದೆಮಾಲಿಗೂ ಆರೋಪಿಗೂ ಯಾವುದೇ ಸಂಬಂದ ಇಲ್ಲ ಎಂದರೆ ಸರಿಯಲ್ಲ . ನಾನು ಯಾವುದೇ ಕಾಲಕ್ಕೂ ನಾನು

ಹೇಳಿದಂತಹ ದಾಳಿಯಲ್ಲಿ ಭಾಗಿ ಯಾಗಿಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳು ಸೃಷ್ಟಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೆ ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಅಂಕೋಲಾ